
# ಯಶಸ್ಸಿಗೆ ಹಲವು ಮಾದರಿ

**2024ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಂಗಮಂಜು 24ನೇ ರ್‍ಯಾಂಕ್ ಪಡೆದು ರಾಜ್ಯಕ್ಕೆ ಮೊದಲಿಗರಾಗಿದ್ದಾರೆ. ಅವರು ತಮ್ಮ ಯಶಸ್ಸಿನ ಹಿಂದಿನ ಸತತ ಪ್ರಯತ್ನದ ಬಗ್ಗೆ ಮಾತನಾಡಿದ್ದಾರೆ.**



■ ರಾಘವೇಂದ್ರ ಕೆ. ತೊಗರ್ಸಿ

**◆ ನಿಮ್ಮ ಹಿನ್ನೆಲೆಯನ್ನು ಹೇಳಬಹುದಾ?**

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಮೈಲನಹಳ್ಳಿ ನಮ್ಮ ಮೂಲ. ಅಪ್ಪ ಆರ್. ರಮೇಶ್ ಐಪಿಎಸ್ ಅಧಿಕಾರಿಯಾಗಿದ್ದರು. ಅವರ ಅಕಾಲಿಕ ಅಗಲಿಕೆಯ ನಂತರ ಅವರ ನೆನಪೇ ನಾಗರಿಕ ಸೇವಾ ಪರೀಕ್ಷೆಗೆ ಸ್ಫೂರ್ತಿಯಾಯಿತು. ನನ್ನ ಪ್ರಯತ್ನದ ಹಿಂದೆ ಅಮ್ಮ ಎನ್. ಸುನೀತಾ ದೊಡ್ಡ ಪಾತ್ರ ನಿರ್ವಹಿಸಿದ್ದಾರೆ. ಅವರೇ ನನ್ನ ಯಶಸ್ಸಿಗೆ ಬೆನ್ನೆಲುಬು. 2019ರಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಪದವಿ ಮುಗಿಸಿದೆ. ಅಲ್ಲಿಯತನಕ ವೈದ್ಯನೇ ಆಗಬೇಕೆಂದುಕೊಂಡಿದ್ದೆ. ಇಂಟರ್ನ್‌ಶಿಪ್ ಮಾಡುವಾಗ ಸಿವಿಲ್ ಸರ್ವೀಸ್ ಬಗ್ಗೆ ಯೋಚನೆ ಬಂತು. ಮೊದಲ ಮೂರು ಪ್ರಯತ್ನದಲ್ಲಿ ಪೂರ್ವಭಾವಿ ಪರೀಕ್ಷೆಯೂ ಪಾಸಾಗಲಿಲ್ಲ. ನಾಲ್ಕು–ಐದನೇ ಪ್ರಯತ್ನದಲ್ಲಿ ಮುಖ್ಯ ಪರೀಕ್ಷೆ ಪಾಸಾಗಲಿಲ್ಲ. ಕೊನೆಯ ಅವಕಾಶವಾಗಿದ್ದ ಆರನೇ ಯತ್ನದಲ್ಲಿ ಮುಖ್ಯಪರೀಕ್ಷೆ ಪಾಸಾಗಿ, ಸಂದರ್ಶನಕ್ಕೆ ಅರ್ಹತೆ ಪಡೆದೆ. ಕೇಂದ್ರ ಲೋಕಸೇವಾ ಆಯೋಗದ 2024ನೇ ಸಾಲಿನ ಪರೀಕ್ಷೆಯಲ್ಲಿ 24ನೇ ರ್‍ಯಾಂಕ್ ಪಡೆದಿದ್ದೇನೆ.

**◆ ಶಾಲೆ–ಕಾಲೇಜುಗಳಲ್ಲಿ ಶೈಕ್ಷಣಿಕ ಮತ್ತು ಪಠ್ಯೇತರ ಜೀವನ ಹೇಗಿತ್ತು?**

ತಂದೆ ಪೊಲೀಸ್ ಸೇವೆಯಲ್ಲಿ ಇದ್ದಿದ್ದರಿಂದ ನಿರಂತರ ವರ್ಗಾವಣೆ ಆಗುತ್ತಿತ್ತು. ಒಮ್ಮೊಮ್ಮೆ ಆರು ತಿಂಗಳು, ಒಂಬತ್ತು ತಿಂಗಳು ಒಂದೊಂದು ಶಾಲೆಯಲ್ಲಿ ಓದಿದ್ದೇನೆ. ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆಯ ಪಠ್ಯ, ಸಿಬಿಎಸ್‌ಇ, ಐಸಿಎಸ್‌ಇ ಮೂರೂ ಪಠ್ಯಕ್ರಮ ಓದಿದ್ದೇನೆ. 11 ಮತ್ತು 12ನೇ ತರಗತಿಯನ್ನು ಮಾತ್ರ ಬೆಂಗಳೂರಿನಲ್ಲೇ ಸಿಬಿಎಸ್‌ಇ ಪಠ್ಯದಲ್ಲಿ ಮಾಡಿದೆ. ನಂತರ ಮೆಡಿಕಲ್ ಕೂಡ ಇಲ್ಲೇ ಮಾಡಿದೆ.

ಶಾಲೆಗಳ ಬದಲಾವಣೆಯಿಂದ ಕಷ್ಟ ಆಗುತ್ತಿತ್ತು. ಸ್ನೇಹಿತರು ಸಿಗುತ್ತಿರಲಿಲ್ಲ. ಆಟವಾಡಲು ತೊಂದರೆಯಾಗುತ್ತಿತ್ತು. ಓದಿನಲ್ಲಿ ಮಾತ್ರ ಸಾಮಾನ್ಯವಾಗಿ ನಾನೇ ಟಾಪರ್ ಆಗಿರುತ್ತಿದ್ದೆ. ಆಗಿನಿಂದಲೂ ನಾಯಕತ್ವ ಗುಣ ನನ್ನಲ್ಲಿತ್ತು. 11 ಮತ್ತು 12ನೇ ತರಗತಿಯಲ್ಲಿ ಎಲ್ಲ ರೀತಿಯ ಬೆಳವಣಿಗೆಗೆ ಅವಕಾಶ ಸಿಕ್ಕಿತು. ಪರೀಕ್ಷೆ ಕೇಂದ್ರೀಕರಿಸಿದ ಶೈಕ್ಷಣಿಕ ಮಾದರಿ ಅದಾಗಿರಲಿಲ್ಲ. ಗಣಿತ ನನ್ನ ನೆಚ್ಚಿನ ವಿಷಯ ಆಗಿತ್ತು. ಕಾನೂನು, ಸಂವಿಧಾನದ ಓದಿನ ಬಗ್ಗೆ ಆಸಕ್ತಿ ಇತ್ತು. ಆಗಲೇ ಓದು–ಬರಹದ ಹವ್ಯಾಸ ಬೆಳೆಯಿತು.

**◆ ಪರೀಕ್ಷಾ ಸಿದ್ಧತೆ ಮತ್ತು ಸಂದರ್ಶನ ಎದುರಿಸಿದ ಬಗೆ ಹೇಗಿತ್ತು?**

ಮೊದಲ ಬಾರಿ ಸಿದ್ಧತೆ ಇಲ್ಲದೆ ಪರೀಕ್ಷೆ ಎದುರಿಸಿದ್ದೆ. 2ನೇ, 3ನೇ ಪ್ರಯತ್ನದ ಹೊತ್ತಿಗೆ ಕೋವಿಡ್ ಆವರಿಸಿತ್ತು. ಆಗ ಮನೆಯಲ್ಲೇ ಇದ್ದು ಓದುವ ಅನಿವಾರ್ಯತೆ ಬಂತು. ಆನ್‌ಲೈನ್ ಕ್ಲಾಸ್ ತೆಗೆದುಕೊಳ್ಳುವ ಅವಕಾಶ ಇದ್ದರೂ ತೆಗೆದುಕೊಳ್ಳಲಿಲ್ಲ. ನನ್ನದೇ ವೇಳಾಪಟ್ಟಿ ಸಿದ್ಧಪಡಿಸಿಕೊಂಡು ಓದಿದೆ. ಕೋವಿಡ್ ದಿನಗಳು ಕಳೆದ ನಂತರ ಬೆಂಗಳೂರಿನ ಚಂದ್ರ ಲೇಔಟ್‌ನಲ್ಲಿ ರೀಡಿಂಗ್ ರೂಮಿಗೆ ಹೋಗಲು ಆರಂಭಿಸಿದೆ. ಅಲ್ಲಿ ಪ್ರಿಲಿಮ್ಸ್ ಪಾಸಾಗಿ ಮೇನ್ಸ್ ಸಿದ್ಧತೆಯಲ್ಲಿ ಇದ್ದವರು ಸಿಕ್ಕರು. ಅವರ ಜೊತೆ ಚರ್ಚಿಸಲು ಸಾಧ್ಯವಾಯಿತು. ಆ ಮೊದಲು ಯೂಟ್ಯೂಬ್ ನೋಡಿ ಸಿದ್ಧತೆಗೆ ಒಂದು ಚೌಕಟ್ಟನ್ನು ಹಾಕಿಕೊಂಡಿದ್ದೆ. ಪರೀಕ್ಷಾರ್ಥಿಗಳ ಪರಿಚಯದ ನಂತರ ಅದನ್ನು ಮಾರ್ಪಡಿಸಿ ಸೂಕ್ತ ಸಿದ್ಧತೆ ಮಾಡಿಕೊಂಡೆ. ಪರೀಕ್ಷೆ ಎದುರಿಸುವ ಬಗೆ ಅರ್ಥವಾಯಿತು. ತರಬೇತಿ ಕೇಂದ್ರದ ಅಧ್ಯಾಪಕರ ಮಾರ್ಗದರ್ಶನ ಮಾತ್ರವಲ್ಲದೆ, ಸ್ಪರ್ಧಾರ್ಥಿಗಳ ಯೋಜನೆ ಕೂಡ ಮುಖ್ಯ ಆಗುತ್ತದೆ ಎನ್ನುವುದು ಗೊತ್ತಾಯಿತು.

‘ಇನ್‌ಸೈಟ್ಸ್’ ಗ್ರಂಥಾಲಯದಲ್ಲೇ ಹೆಚ್ಚು ಓದಿದೆ. ಸಹಸ್ಪರ್ಧಿಗಳಿಂದ ಪ್ರೋತ್ಸಾಹ ಸಿಕ್ಕಿತು. ಬೇರೆ ಬೇರೆ ಸಂಸ್ಥೆಗಳು ನಡೆಸುವ ಟೆಸ್ಟ್ ಸೀರೀಸ್ ಬರೆಯಲು ಶುರುಮಾಡಿದೆ. ಅನೇಕರು ಉಚಿತವಾಗಿ ಆ ಅವಕಾಶ ಕಲ್ಪಿಸುತ್ತಾರೆ. ಆಸಕ್ತರು ಅದನ್ನು ಬಳಸಬಹುದು. ಸಂದರ್ಶನದ ಸಂದರ್ಭ ಸ್ವಲ್ಪ ಸಂಕೀರ್ಣ ಆಗಿರುತ್ತದೆ. ಅದಕ್ಕೆ ಮಾರ್ಗದರ್ಶನವನ್ನು ಬೆಂಗಳೂರು ಮತ್ತು ದೆಹಲಿಯಲ್ಲಿ ತೆಗೆದುಕೊಂಡೆ. ಸಂದರ್ಶನದ ಕಾಲಾವಕಾಶ ಕಡಿಮೆ ಇತ್ತು. ನನಗೆ ಆರನೇ ದಿನ ಮೌಖಿಕ ಪರೀಕ್ಷೆ ನಡೆಯಿತು. ಅದರಲ್ಲಿ ಸಾಧಾರಣ ಅಂಕಗಳು ಬಂದಿವೆ. ಮಾನವಶಾಸ್ತ್ರ (Anthropology) ನನ್ನ ಐಚ್ಛಿಕ ವಿಷಯ. ಅದರಲ್ಲಿ ಸ್ವಲ್ಪ ಕಡಿಮೆ ಅಂಕಗಳು ಬಂದಿವೆ. ಇಲ್ಲದಿದ್ದರೆ ಟಾಪ್ 3ರಲ್ಲಿ ಇರುತ್ತಿದ್ದೆ ಅನ್ನಿಸುತ್ತದೆ. ಮುಂದೆ ಐಎಎಸ್ ನಿರೀಕ್ಷೆ ಮಾಡುತ್ತಿದ್ದು, ಕರ್ನಾಟಕಕ್ಕೆ ಪ್ರಾಶಸ್ತ್ಯ ನೀಡುವೆ.

**◆ ನಿಮ್ಮ ಸೇವಾ ಆದ್ಯತೆಗಳೇನು?**

ಆಡಳಿತ ಸೇವೆಯನ್ನು ನೋಡುವ ಅವಕಾಶ ಬಾಲ್ಯದಲ್ಲೇ ನನಗೆ ಸಿಕ್ಕಿದೆ. ಆಡಳಿತ ವ್ಯವಸ್ಥೆಯನ್ನು ನಿರ್ವಹಿಸುವ ಅಧಿಕಾರಿಗಳು ತೆರೆಯ ಹಿಂದೆ ಇರುತ್ತಾರೆ. ಅವರೇ ಸರ್ಕಾರ ಎಂಬ ಯಂತ್ರವನ್ನು ಮುನ್ನಡೆಸುವ ಚಾಲಕ ಶಕ್ತಿ. ಆ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಜನರಿಗೆ ಸರ್ಕಾರದ ನೆರವು ಸಿಗುವಂತೆ ಆಗಬೇಕು. ಭವಿಷ್ಯದಲ್ಲಿ ತಂತ್ರಜ್ಞಾನ ತುಂಬ ಬದಲಾವಣೆ ಮಾಡುತ್ತದೆ. ಕೃತಕ ಬುದ್ಧಿಮತ್ತೆ (ಎಐ) ಎಲ್ಲ ಕ್ಷೇತ್ರವನ್ನು ಪ್ರವೇಶಿಸುತ್ತದೆ. ಸರ್ಕಾರ ಅದನ್ನು ಒಳಗೊಳ್ಳುವ ಮೂಲಕ ಆಡಳಿತ ಮುನ್ನಡೆಸಬೇಕು. ಕೆಳಹಂತದ ತನಕ ಅದನ್ನು ಪರಿಣಾಮಕಾರಿಯಾಗಿ ತಲುಪಿಸುವ ಬಗ್ಗೆ ಚಿಂತನೆ ಇದೆ.

**◆ ಸಾಮಾನ್ಯ ಅಭ್ಯರ್ಥಿಯೊಬ್ಬ ಯುಪಿಎಸ್‌ಸಿ ಪರೀಕ್ಷೆಗೆ ಹೇಗೆ ಅಣಿಯಾಗಬೇಕು?**

ನನ್ನ ಪ್ರೊಫೈಲ್ ನೋಡಿ ಪ್ರಿವಿಲೇಜ್ ಇರುವವರಿಗೆ ಮಾತ್ರ ಸಾಧ್ಯ ಎಂದು ಯೋಚಿಸಬೇಕಿಲ್ಲ. ವೃತ್ತಿಯಿಂದ ವೈದ್ಯಾಧಿಕಾರಿ ಎನ್ನುವುದನ್ನು ಪರಿಗಣಿಸಬೇಕಿಲ್ಲ. ಈ ಬಾರಿ ಯುಪಿಎಸ್‌ಸಿ ಪಾಸಾದ 1009 ಅಭ್ಯರ್ಥಿಗಳಲ್ಲಿ ಬಡವರು, ಗ್ರಾಮೀಣ ಪ್ರದೇಶದವರೂ ಇದ್ದಾರೆ. ಅವರಲ್ಲಿ ಬಹುತೇಕರು ತಮಗೆ ಲಭ್ಯವಿರುವ ಸೌಲಭ್ಯವನ್ನೇ ಬಳಸಿ ಯಶಸ್ವಿಯಾಗಿದ್ದಾರೆ. ಅವೆಲ್ಲ ಮಾದರಿಯಾಗಿ ಇಟ್ಟುಕೊಂಡು ಓದಬಹುದು.

ಪ್ರತಿಕ್ರಿಯಿಸಿ: feedback@sudha.co.in